## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾಸನ

## ಎಸ್ ಸಿ ನಂ 154/2025

| **ಪಿರ್ಯಾದಿಃ** | ವಿರುದ್ಧ | **ಆರೋಪಿಃ** |
|---|---|---|
| ಯಸಳೂರು ಪೊಲೀಸರು | | ಅಪ್ಪಸ್ವಾಮಿಗೌಡ ಹಾಗೂ ಮತ್ತೊಬ್ಬರು |

**ಶ್ರೀ ಎಸ್.ಎ ಹಿದಾಯತ್ ಉಲ್ಲಾ ಷರೀಪ್,** 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾಸನ ಆದ ನಾನು ಆರೋಪಿತರಾದ

| | |
|---|---|
| 1ನೇ ಆರೋಪಿ | ಅಪ್ಪಸ್ವಾಮಿಗೌಡ ಬಿನ್ ಲೇಟ್ ಸುಬ್ಬೇಗೌಡ, 69 ವರ್ಷ, ವ್ಯವಸಾಯ |
| 2ನೇ ಆರೋಪಿ | ಸುದೀಪ ಬಿನ್ ಅಪ್ಪಸ್ವಾಮಿಗೌಡ, 45 ವರ್ಷ, ವ್ಯವಸಾಯ |
| | ಆರೋಪಿಗಳು ಸಕಲೇಶಪುರ ತಾಲ್ಲೂಕು, ಯಸಳೂರು ಹೋಬಳಿ, ಮತ್ತೂರು ಹೊಸಹಳ್ಳಿ ಗ್ರಾಮದ ವಾಸಿಗಳು. |

**ನಿಮ್ಮಗಳ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 06.01.2024 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಚಾಸಾ-1 ಶೃತಿ ರವರು ಮತ್ತೂರು ಹೊಸಹಳ್ಳಿ ಗ್ರಾಮದ ಸಾಲೆಮಠದ ಮೋರಿಯ ಹತ್ತಿರ ತೋಟದ ಕಡೆಗೆ ನಡೆದುಕೊಂಡು ಹೋಗುತ್ತಿದ್ದಾಗ 1ನೇ ಆರೋಪಿಯಾದ ಅಪ್ಪಸ್ವಾಮಿಗೌಡ ರವರು ಕತ್ತಿಯನ್ನು ಹಿಡಿದುಕೊಂಡು 2ನೇ ಆರೋಪಿ ಸುದೀಪ ರವರು ಕೈಯಲ್ಲಿ ಕೋವಿ ಹಿಡಿದುಕೊಂಡು ಬಂದು ಚಾಸಾ-1 ಶೃತಿ ರವರಿಗೆ ಆ ರಸ್ತೆಯಲ್ಲಿ ತಿರುಗಾಡದಂತೆ ಹೇಳಿದ್ದು ಆಗ ಶೃತಿ ರವರು ಸಾರ್ವಜನಿಕ ರಸ್ತೆಯಲ್ಲಿ ಏಕೆ ಓಡಾಡಬಾರದು ಎಂದು ನಿಮ್ಮನ್ನು ಪ್ರಶ್ನಿಸಿದಾಗ ಆರೋಪಿ-1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೂಂಡು ನಿಮ್ಮ ಪೈಕಿ 1ನೇ ಆರೋಪಿ ಅಪ್ಪಸ್ವಾಮಿಗೌಡರವರು ಚಾಸಾ-1 ಶೃತಿ ರವರನ್ನು

ಕುರಿತು " ಲೋಫರ್ ಮುಂಡೆ ನನ್ನ ಹತ್ತಿರ ವಾದ ಮಾಡುತ್ತೀಯಾ" ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿಭಂಗ ಉಂಟು ಮಾಡಲು ಉದ್ರೇಕಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿ ಅಪಮಾನಗೊಳಿಸಿದ್ದು, ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹಕಲಂ. 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 1ನೇ ಆರೋಪಿ ಅಪ್ಪಸ್ವಾಮಿ ಗೌಡ ರವರು ಚಾಸಾ–1 ಶೃತಿ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕತ್ತಿಯಿಂದ ಆಕೆಯ ತಲೆಯ ಎಡಭಾಗಕ್ಕೆ ಜೋರಾಗಿ ಕಡಿದು ಕೊಲೆ ಮಾಡಲು ಪ್ರಯತ್ನಿಸಿದ್ದು, ನಿಮ್ಮ ಪೈಕಿ 2ನೇ ಆರೋಪಿ ಸುದೀಪ ರವರು 1ನೇ ಆರೋಪಿ ರವರ ಬಾಬ್ತು 21628 ನಂಬರಿನ ಎಸ್ ಬಿ ಬಿ ಎಲ್ ಬಂದೂಕನ್ನು ಚಾಸಾ–1 ಶೃತಿ ಕಡೆಗೆ ತೋರಿಸಿ ಬಂದೂಕಿನಿಂದ ಗುಂಡು ಹಾರಿಸಿ ಶೃತಿಯನ್ನು ಕೊಲೆ ಮಾಡಲು ಪ್ರಯತ್ನಿಸಿದ್ದು, ಆರೋಪಿ–1 ಹಾಗೂ 2 ಆದ ನೀವು ಭಾರತೀಯ ದಂಡ ಸಂಹಿತೆ ಕಲಂ.307 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 1ನೇ ಆರೋಪಿ ಅಪ್ಪಸ್ವಾಮಿಗೌಡ ರವರು ಮಾರಕಾಯಧವಾದ ದೊಣ್ಣೆಯಿಂದ ಚಾಸಾ–1 ಶೃತಿ ರವರ ಎಡಭಾಗದ ಬೆನ್ನಿಗೆ ಹೊಡೆದು ಸ್ವಇಚ್ಚೆಯಿಂದ ಗಾಯಪಡಿಸಿದ್ದು, ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.324 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಹಲ್ಲೆಯಿಂದ ನೆಲದ ಮೇಲೆ ಬಿದ್ದ ಚಾಸಾ–1 ಶೃತಿ ರವರಿಗೆ ಕೈಯಿಂದ ಹೊಡೆದು ಸ್ವಇಚ್ಚೆಯಿಂದ ನೋವುಪಡಿಸಿದ್ದು, ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಐದನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–

1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ಚಾಸಾ–1 ಶೃತಿ ರವರ ಮಾನಭಂಗ ಮಾಡುವ ಉದ್ದೇಶದಿಂದ ಆಕೆ ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಅಪಮಾನಗೊಳಿಸಿದ್ದು, ಆರೋಪಿ–1 ಹಾಗೂ 2 ಆದ ನೀವು ಭಾರತೀಯ ದಂಡ ಸಂಹಿತೆ ಕಲಂ.354(ಬಿ) ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆರನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 2ನೇ ಆರೋಪಿ ಸುದೀಪ ರವರು 21628 ನಂಬರಿನ ಎಸ್ ಬಿ ಬಿ ಎಲ್ ಬಂದೂಕನ್ನು ಚಾಸಾ–1 ಶೃತಿ ಕಡೆಗೆ ತೋರಿಸಿ ಬಂದೂಕಿನಿಂದ ಗುಂಡು ಹಾರಿಸಿ ಆಕೆಯನ್ನು ಕೊಲೆ ಮಾಡುವುದಾಗಿ ಹೇಳಿ ಕೊಲೆ ಬೆದರಿಕೆ ಹಾಕಿ ಪ್ರಾಣಭಯ ಉಂಟು ಮಾಡಿ ಅಪರಾಧಿಕ ಭಯೋತ್ಪಾದನೆ ನಡೆಸಿದ್ದು, ಆರೋಪಿ–1 ಹಾಗೂ 2 ರವರುಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 2ನೇ ಆರೋಪಿ ಸುದೀಪ್ ರವರು 1ನೇ ಆರೋಪಿ ಅಪ್ಪಸ್ವಾಮಿಗೌಡರವರಿಗೆ ಸೇರಿದ ಬಾಬ್ತು 21628 ನಂಬರಿನ ಎಸ್ ಬಿ ಬಿ ಎಲ್ ಬಂದೂಕನ್ನು ಚಾಸಾ–1 ಶೃತಿ ರವರಿಗೆ ಕೊಲೆ ಮಾಡಲು ಪ್ರಯತ್ನಿಸುವ ಬಗ್ಗೆ ಹಾಗೂ ಪ್ರಾಣಬೆದರಿಕೆ ಹಾಕಲು ಬಳಸಿದ್ದು ಆರೋಪಿಗಳಾದ ನೀವು ಭಾರತೀಯ ಆಯುಧ ಕಾಯಿದೆ ಕಲಂ.25ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ಆರೋಪಗಳು ನನ್ನ ಸಂಜ್ಞೆಗೆ ಒಳಪಡುತ್ತವೆ ಹಾಗೂ ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ಅಧಿವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

ದಿಃ–06.03.2026.

**(ಎಸ್.ಎ ಹಿದಾಯತ್ ಉಲ್ಲಾ ಷರೀಫ್)**
**2ನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**